ಘೋಷಣೆಯನ್ನು ಮಾಡಬೇಕು ನೀವು, ಅವರ ಭೂಮಿಯಲ್ಲಿ ಅವರು ಎಷ್ಟು ದೊಡ್ಡದಾಗಿಬೇಕಾದರೂ ಕಾಲುವೆಯನ್ನು ತೋಡಿಕೊಳ್ಳಬಹುದು, ಆದರೆ ನಿಮ್ಮ ಕಾಲುವೆ ಒಣಗಿರುತ್ತದೆ, ಒಂದು ಹನಿ ನೀರನ್ನು ನಾವು ಬಿಡುವುದಿಲ್ಲವೆನ್ನುವ ಘೋಷಣೆಯನ್ನು ಮಾಡುತ್ತೀರಾ ? ಧೈರ್ಯವಿದೆಯೇ ನಿಮಗೆ ? ಆ ಧೈರ್ಯವನ್ನು ಪ್ರದರ್ಶನ ಮಾಡದಿದ್ದರೆ ಸಮಾನಾಂತರ ಕಾಲುವೆಯನ್ನು ತೆಗೆದೇ ತೆಗೆಯುತ್ತಾರೆ. ಈ ಎರಡು ಘೋಷಣೆಗಳನ್ನು ಸರ್ಕಾರದಿಂದ ನಾನು ಅಪೇಕ್ಷೆ ಪಡುತ್ತೇನೆ ಮಾನ್ಯ ಸಭಾಧ್ಯಕ್ಷರೇ, ಕಾನೂನು ಮಂತ್ರಿಗಳು ಏನು ಹೇಳುತ್ತಾರೋ ಗೊತ್ತಿಲ್ಲ. ನೀರಾವರಿ ಮಂತ್ರಿಗಳನ್ನು ತಾವು ಕರೆಸಲೇಬೇಕು, ಇದು ಒಂದು ಬಹಳ ಮುಖ್ಯವಾದ ವಿಚಾರ. ಏತಕ್ಕೆಂದರೆ 15 ಲಕ್ಷ ಏಕರೆಗಳಲ್ಲಿ ನೀರಾವರಿ ಮಾಡುವುದನ್ನು ಕಳೆದುಕೊಂಡುಬಿಡುತ್ತೇವೆ. 5-6 ಜಿಲ್ಲೆಗಳಲ್ಲಿ ಧಾರವಾಡ,ಚಿತ್ರದುರ್ಗ,ಬಳ್ಳಾರಿ ಇಲ್ಲೆಲ್ಲ ಕಳೆದುಕೊಳ್ಳುತ್ತೇವೆ. ಆ ಕಾರಣ ನೀರಾವರಿ ಮಂತ್ರಿಗಳನ್ನು ದಯವಿಟ್ಟು ತಾವು ಕರೆಸಿ ಈ ಎರಡು ಘೋಷಣೆಯನ್ನು ಮಾಡಿಸುತ್ತೀರಾ ಎಂದು ಕೇಳುತ್ತೇನೆ ರಾಷ್ಟ್ರೀಯ ಜಲನೀತಿ ಇಲ್ಲದಿರುವಾಗ ಯಾವುದೇ ನ್ಯಾಯಮಂಡಲಿ ತೀರ್ಪನ್ನು ಕೊಟ್ಟಿದ್ದರೂ ಅದನ್ನು ನಾವು ತಿರಸ್ಕರಿಸುತ್ತೇವೆಂದು ಆಂಧ್ರದವರಿಗೆ ಎಚ್ಚರಿಕೆಯನ್ನು ಕೊಡಬೇಕು, ನೀವೆಷ್ಟು ದೊಡ್ಡ ಕಾಲುವೆಯನ್ನು ತೋಡಿದರೂ ಅದು ತೆಲಗುಗಾಂಗಾ ಇರಬಹುದು, ಅಥವಾ ಈ ಸಮಾನಾಂತರ ಕಾಲುವೆ ಇರಬಹುದು, ನೀವು ಎಷ್ಟಾದರೂ ತೆಗೆದುಕೊಳ್ಳಿ, ಒಂದು ಹನಿ ನೀರನ್ನು ನಮ್ಮ ನ್ಯಾಯವಾದ ಹಕ್ಕೇನಿದೆ ಅದನ್ನು ಬಿಡುವುದಿಲ್ಲವೆನ್ನುವಂಥ ಘೋಷಣೆಯನ್ನು ಮಾಡಬೇಕೆಂದು ನನ್ನ ಒತ್ತಾಯ.

* ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಒಂದು ನಿಮಿಷ.

ಶ್ರೀ ಎಂ.ಡಿ.ನಂಜುಂಡಸ್ವಾಮಿ : ಮಾನ್ಯ ಅಧ್ಯಕ್ಷರೇ, ಈ ಭಾವಚಿತ್ರವನ್ನು ತಮ್ಮ ಅವಗಾಹನೆಗಾಗಿ ಕಳುಹಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ, ಈ ಸಮಾನಾಂತರ ಕಾಲುವೆಯಬಗ್ಗೆ ತಮಗೆ ಗೊತ್ತಿರುವಂತೆ ಈ ಸದನದಲ್ಲಿ ನಾನು ಅನೇಕ ಬಾರಿ ಪ್ರಸ್ತಾಪ ಮಾಡಿರುತ್ತೇನೆ. ಇದರ ಬಗ್ಗೆ ಒಂದು ದೊಡ್ಡ ಪಿತೂರಿ ನಡೆಯುತ್ತಿದೆ. ಆಂಧ್ರದವರು ದೊಡ್ಡ ಪಿತೂರಿ ನಡೆಸುತ್ತಿದ್ದಾರೆ. ನಮ್ಮ ಕರ್ನಾಟಕ ಸರ್ಕಾರಕ್ಕೆ ಅವರ ಪಿತೂರಿ ಇನ್ನೂ ಅರ್ಥವಾಗಿಲ್ಲ. ಸಮಾನಾಂತರ ಕಾಲುವೆಯ ಬಗ್ಗೆ ನಾನು ಇಲ್ಲಿ ಕೇಳಿದಾಗ ಮಾನ್ಯ ನೀರಾವರಿ ಸಚೀವರು ಏನು ಹೇಳಿದರೆಂದರೆ ನಮ್ಮ ರಕ್ಷಣೆಯನ್ನು ಮಾಡುವುದರಲ್ಲಿ ನಾವು ಬದ್ದರಾಗಿದ್ದೇವೆ, ಯಾರೂ ಹೇದರಬೇಕಾಗಿಲ್ಲವೆನ್ನುವ ಮಾತನ್ನು ಹೇಳಿದರು. ಆದರೆ ಇವತ್ತು ಅಲ್ಲಿ ಒಂದು ಕಾರ್ಯಾಲಯವನ್ನು ತೆಗೆಯಿತ್ತಿದ್ದಾರೆ. ಸಮಾನಾಂತರ ಕಾಲುವೆ ತೊಡಬೇಕಾದರೆ, ತೋಡತಕ್ಕ ವ್ಯವಸ್ಥೆ ಮತ್ತು ಅಲ್ಲಿ ನಡೆಯತಕ್ಕ ವ್ಯವಸ್ಥೆಯ ಪ್ರತಿಯೊಂದು ಕಾರ್ಯವನ್ನು ನೋಡುವುದಕ್ಕೊಸ್ಕರ ಒಂದು ಕಾರ್ಯಾಲಯವನ್ನು ತೆರೆಯುತ್ತಿದ್ದಾರೆ. ಅದು ಇನ್ನೂ ಈ ಸರ್ಕಾರದ ಗಮನಕ್ಕೆ ಬಂದಿಲ್ಲ. ನಾವು ಇಲ್ಲಿ ಕುಳಿತುಕೊಂಡು ವಿರೋಧ ಮಾಡಿದ್ದೇವೆಂದು ಹೇಳಿದರೆ . ಅದು ನಡೆಯುವುದಕ್ಕೆ ಸಾಧ್ಯವಿಲ್ಲ. ಅದರ ಬಗ್ಗೆ ಸ್ಪಷ್ಟತೆ ಕೊಡಬೇಕು ಮತ್ತು ತುಂಗಭದ್ರಾ ಸಮಾನಾಂತರ ಕಾಲುವೆ ಬಗ್ಗೆ ಈಗ ಏನು ಅಲ್ಲಿ ಕಾರ್ಯಾಲಯ ಮಾಡಿದ್ದಾರೆ, ಅದರ ಬಗ್ಗೆ ಸರ್ಕಾರಕ್ಕೆ ಮಾಹಿತಿ ಏನಿದೆ,

ಅದನ್ನು ಸ್ಪಷ್ಟಪಡಿಸಬೇಕು. ಇದು ಏನಾಗುತ್ತದೆಂದರೆ ಸರ್ಕಾರ ಒಂದು ರೀತಿ ನಿದ್ರೆ ಮಾಡುತ್ತಿರುವುದು, ಅಂಧ್ರದವರು ಏನು ಬೇಕಾದರೂ ಮಾಡುವುದಕ್ಕೆ ಹೊರಟರೆ ನಮಗೆ ಅದರಿಂದ ಬಹಳ ಅಪಾಯ ಒದಗುತ್ತದೆ. ಈ ಅಪಾಯದ ಎಚ್ಚರಿಕೆಯನ್ನು ನಾನು ಈ ಸದನದಲ್ಲಿ ಅನೇಕ ಬಾರಿ ಕೊಟ್ಟಿದ್ದೇನೆ. ಆಂಧ್ರದ ಸಚೀವರು ಕೂಡ ಕರ್ನಾಟಕ ಗಡಿ ಪ್ರದೇಶಕ್ಕೆ ಬಂದು ಭೇಟಿ ಮಾಡಿ ಅಲ್ಲಿ ನಡೆದಿರತಕ್ಕ ಪಿತೂರಿಯಲ್ಲಿ ಕೆಲವರ ಜೊತೆಯಲ್ಲಿ ಭಾಗಿಯಾಗಿದ್ದಾರೆಂದು ನಾನು ಸದನದಲ್ಲಿ ಹೇಳಿದ್ದೇ. ಮಾನ್ಯ ನಂಜುಂಡ ಸ್ವಾಮಿಯವರು ಆ ಚಿತ್ರದ ಪ್ರತಿಯನ್ನು ಕಳುಹಿಸಿದ್ದಾರೆ. ಆಂಧ್ರದವರು ಅಲ್ಲಿ ದೊಡ್ಡದಾದ ಕಾರ್ಯಾಲಯ ತೆರೆದಿದ್ದಾರೆ. ಇದು ನಮ್ಮ ಸರ್ಕಾರಕ್ಕೆ ಇವತ್ತಿನವರೆಗೆ ಗೊತ್ತಿಲ್ಲವೆಂದರೆ ಹೇಗೆ ? ಇದು ನಿಜವಾಗಿ ನಮ್ಮ ರಕ್ಷಣೆಯ ಪ್ರಶ್ನೆ. ಇವತ್ತು ನಾವು ಬಚಾವತ್ ಅವಾರ್ಡನ್ನು ತಿರಸ್ಕರಿಸಬೇಕಾಗಿದೆ, ಕಾವೇರಿ ನ್ಯಾಯ ಮಂಡಲಿಯನ್ನು ತಿರಸ್ಕರಿಸಬೇಕಾಗಿದೆ. ಇದರ ಬಗ್ಗೆ ಸರ್ಕಾರದ ನಿಲವು ಏನು ಎಂದು ಅವರು ಸ್ಪಷ್ಟಪಡಿಸಬೇಕಾಗುತ್ತದೆ.ಇದರ ಬಗ್ಗೆ ಸರ್ಕಾರಕ್ಕೆ ಸಿಕ್ಕಿರುವ ಮಾಹಿತಿ ಏನು ಎಂದು ತಿಳಿಸಬೇಕೆಂದು ಕೇಳುತ್ತಿದ್ದೇನೆ.

* ಶ್ರೀ ವೈ.ಕೆ.ರಾಮಯ್ಯ (ಕುನಿಗಲ್) : ಮಾನ್ಯ ಅಧ್ಯಕ್ಷರೆ, ರಾಷ್ಟ್ರೀಯ ಜಲನೀತಿ ನಿರೂಪಣೆ ಆಗುವವರೆಗೆ, ಖಚಿತವಾದ ತೀರ್ಮಾನಕ್ಕೆ ಬರುವವರೆಗೆ ಕೇಂದ್ರ ಸರ್ಕಾರ ನ್ಯಾಯ ಮಂಡಲಿಯನ್ನು ರಚಿಸುವುದು ಬೇಡ ಎಂದು ವಿ.ಪಿ.ಸಿಂಗ್ ಅವರ ಸರ್ಕಾರ ಇದ್ದ ಕಾಲದಿಂದ ವಿರೋಧ ಮಾಡುತ್ತಾ ಬಂದಿದ್ದೆವು. ಆದರೂ ಕೂಡ ಮಂಡಲಿಯ ರಚನೆಯಾಯಿತು. ಅದನ್ನೇ ನಮ್ಮ ಸ್ನೇಹಿತರು ಇವತ್ತು ಪ್ರಸ್ತಾಪ ಮಾಡುತ್ತಿದ್ದಾರೆ. ರಾಷ್ಟ್ರೀಯ ಜಲ ನೀತಿಯ ನಿರೂಪಣೆ ಆಗದೆ ನೀರಿನ ವಿತರಣೆ ಬಗ್ಗೆ ತೀರ್ಮಾನ ಮಾಡುವುದಕ್ಕೆ ಯಾವುದೇ ಆಧಾರವಿಲ್ಲ. ಆಧಾರ ಇಲ್ಲದೆ ಕೊಡುವ ತೀರ್ಪನ್ನು ಈ ಸರ್ಕಾರ ಗೌರವಿಸಬೇಕಾಗಿಲ್ಲವೆಂದು ಏನು ನಂಜುಂಡ ಸ್ವಾಮಿಯವರು ಹೇಳಿದ್ದಾರೆ, ಅದಕ್ಕೆ ನಾನು ಸಹ ಧ್ವನಿಗೂಡಿಸುತ್ತೇನೆ. ಇತ್ತೀಚೆಗೆ ಬಂದಿರುವ ಆತಂಕದ ವಿಷಯ ಅಂದರೆ, ಕಾವೇರಿ ನದಿ ನೀರಿನ ಹಂಚಿಕೆ ಬಗ್ಗೆ ನಡೆಯುತ್ತಿರುವ ವಿವಾದದ ಚರ್ಚೆಯ ಮಧ್ಯದಲ್ಲಿ ಕರ್ನಾಟಕ ರಾಜ್ಯದ ಯಾವುದೇ ಹೊಸ ಯೋಜನೆಗಳಿಗೆ ಅನುಮತಿ ಕೊಡಕೂಡದು, ತಡೆಯಾಜ್ಞೆ ಕೊಡಬೇಕೆಂದು ತಮಿಳ್ನಾಡಿನವರು ಅಲ್ಲಿ ಅರ್ಜಿಸಲ್ಲಿಸಿದ್ದಾರೆ. ಈ ಸದನಕ್ಕೆ ಮತ್ತು ರಾಜ್ಯದ ಜನತೆಗೆ ಅವರು ತಡೆಯಾಜ್ಞೆ ಕೇಳಿರುವುದು ನಿಜವೆ, ಮತ್ತು ಆ ವಿಷಯದಲ್ಲಿ ಸರ್ಕಾರ ಏನು ಕ್ರಮ ಕೈಗೊಳ್ಳುತ್ತದೆಂದು ಗೊತ್ತಾಗಬೇಕು. ಹೊಸದಾಗಿ ಯಾವುದೇ ಯೋಜನೆಯನ್ನು ಕೈಗೊಳ್ಳದ ರೀತಿಯಲ್ಲಿ ತಡೆಯಾಜ್ಞೆ ಕೊಡಬೇಕೆಂದು ಹೇಳಿದ್ದಾರೆ.They sought for injunction against the Government of Karnatka not to take up any new scheme. ಆ ವಿಷಯದಲ್ಲಿ ಸದನಕ್ಕೆ ಅರಿವು ಮಾಡಿಕೊಡಬೇಕು. ಮೂರನೆಯದಾಗಿ, ಸ್ನೇಹಿತರು ಹೇಳಿರುವುದು ಕೃಷ್ಣ, ಕಾವೇರಿ ನೀರಿನಲ್ಲಿ ಕೂಡ ದ್ರೋಹ ಆಗುತ್ತಿದೆ ಮತ್ತು ಅಲ್ಲಿ ತೆಲುಗು ಗಂಗಾಕ್ಕೆ ಕಾಲುವೆ ತೆಗೆಯಬೇಕಾದುದು 1500 ಕ್ಯೂಸೆಕ್ಸ್ ನೀರು ಹೋಬೇಕಾದ ಕಾಲುವೆ. ಆದರೆ ಇವತ್ತು ಕಾಲುವೆ ತೆಗೆಯುತ್ತಿರುವುದು 11 ಸಾವಿರ ಕ್ಯೂಸೆಕ್ಸ್ ನೀರು ಹೋಗವಷ್ಟು ಕಾಲುವೆಯನ್ನು ತೆಗೆಯುತ್ತಿದ್ದಾರೆ. ನಾನು ಸರ್ಕಾರಕ್ಕೆ ಕೇಳುವುದಕ್ಕೆ ಇಷ್ಟ ಪಡುತ್ತೇನೆ. Is it not a violation of the terms of Bachawat Award

or anything before us. ಎಲ್ಲಿ ತೆಲುಗುಗಂಗಾಕ್ಕೆ ಕುಡಿಯುವ ನೀರಿನ ಯೋಜನೆಗೆ 1500 ಕ್ಯೂಸೆಕ್ಸ್ ನೀರನ್ನು ತೆಗೆದುಕೊಂಡು ಹೋಗುವುದಕ್ಕೆ ಕಾಲುವೆ ಏನು ಮಾಡಬೇಕಾಗಿತ್ತು ಅಂಥ ಕಡೆ 11 ಸಾವಿರ ಕ್ಯೂಸೆಕ್ಸ್ ನೀರನ್ನು ತೆಗೆದುಕೊಂಡು ಹೋಗುವುದಕ್ಕೆ ಕಾಲುವೆ ಮಾಡುತ್ತಿದ್ದಾರೆ. ಈ ವಿಷಯದಲ್ಲಿ ಸರ್ಕಾರ ಅದನ್ನು ತಡೆಯುವುದಕ್ಕೆ ಏನು ಕ್ರಮ ತೆಗೆದುಕೊಂಡಿದೆ ? ಇದನ್ನು ದಯವಿಟ್ಟು ಸದನಕ್ಕೆ ತಿಳಿಸಬೇಕೆಂದು ಪ್ರಾರ್ಥಿಸುತ್ತೇನೆ.

ಶ್ರೀ ಎಸ್. ಎಚ್. ಕೌಜಲಗಿ : ಇವತ್ತಿನ ದಿವಸ ನಾವು ರಾಜ್ಯದಲ್ಲಿ ಕಳ್ಳಬಟ್ಟಿ ತಯಾರಿಕೆ ನಿಲ್ಲಿಸುವ ಸಲುವಾಗಿ ಸರ್ಕಾರದವರು ಸಂಪೂರ್ಣವಾಗಿ ಕ್ರಮ ಕೈಗೊಂಡಿದ್ದೇವೆಂದು ಮೇಲಿಂದ ಮೇಲೆ ಹೇಳುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ನೀರಾವರಿ ಬಗ್ಗೆ ನಾವು ಹೇಳಿದೆವು. ಈಗ ಮುಖ್ಯ ಮಂತ್ರಿಗಳು ಸದನದಲ್ಲಿದ್ದಾರೆ. ಅವರು ಉತ್ತರ ಹೇಳುವುದಕ್ಕೆ ಮೊದಲೇ ಮಾನ್ಯ ಸದಸ್ಯರು ಕಳ್ಳಬಟ್ಟಿ ಬಗ್ಗೆ ಹೇಳುತ್ತಿದ್ದಾರೆ, ಅದು ಇದಕ್ಕೆ ಸಂಬಂದಪಟ್ಟದ್ದಲ್ಲ.

ಉಪಾಧ್ಯಕ್ಷರು : ಕಳ್ಳಬಟ್ಟಿಯದು ಸಹ ಅವರಿಗೇ ಬರುತ್ತದೆ. ಒಟ್ಟಿಗೆ ಎರಡಕ್ಕೂ ಉತ್ತರ ಹೇಳುತ್ತಾರೆ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಕಾವೇರಿ ವಿಷಯ ಬಹಳ ಪ್ರಾಮುಖ್ಯವಾದುದು. ಅದಕ್ಕೆ ಉತ್ತರ ಕೊಡಿಸಿ.

ಉಪಾಧ್ಯಕ್ಷರು : ಎಲ್ಲವೂ ಪ್ರಾಮುಖ್ಯವಾದವುಗಳು. ಅವರು ಪ್ರಸ್ತಾವನೆ ಮಾಡುತ್ತಿದ್ದಾರೆ. ಎರಡಕ್ಕೂ ಮುಖ್ಯ ಮಂತ್ರಿಗಳು ಉತ್ತರ ಕೊಡುತ್ತಾರೆ, ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ವಾಟಾಳ್ ನಾಗರಾಜ್ : ಕಳ್ಳಬಟ್ಟಿ ಬೇರೆ, ಕಾವೇರಿ ಬೇರೆ, ತುಂಗಭದ್ರ ಬೇರೆ, ಬಚಾವತ್ ಬೇರೆ. ನಾನು ಕೈಮುಗಿದು ಪ್ರಾರ್ಥಿಸುತ್ತೇನೆ, ಮುಖ್ಯ ಮಂತ್ರಿಗಳು ಈ ಬಗ್ಗೆ ಮಾಹಿತಿ ಏನಿದೆ ಎಂದು ಹೇಳಲಿ.

ಉಪಾಧ್ಯಕ್ಷರು : ಅದು ಅವರಿಗೆ ಸಂಭಂಧಪಟ್ಟದ್ದಲ್ಲವೆ ? ಏತಕ್ಕೆ ಈ ರೀತಿ ಮಾತನಾಡುತ್ತೀರಿ ? ದಯವಿಟ್ಟು ಕುಳಿತುಕೊಳ್ಳಿ. ಎರಡಕ್ಕೂ ಒಟ್ಟಿಗೆ ಉತ್ತರ ಹೇಳುತ್ತಾರೆ.

(IV) ವಿಷಯ : ಕಳ್ಳಬಟ್ಟಿ ತಯಾರಿಕೆಯನ್ನು ನಿಲ್ಲಿಸುವ ಬಗ್ಗೆ

* ಶ್ರೀ ಎಸ್.ಹೆಚ್.ಕೌಜಲಗಿ(ಬೈಲಹೊಂಗಲ) : ಹಿಂದೆ ಎಕ್ಸೈಜ್ ಡಿಪಾರ್ಟ್‌ಮೆಂಟಿನವರ ಸಹಾಯದಿಂದ ಕಳ್ಳಬಟ್ಟಿ ತಯಾರು ಮಾಡುತ್ತಿದ್ದರು. ಈಗ ಎಕ್ಸೈಜ್ ಡಿಪಾರ್ಟ್‌ಮೆಂಟಿನವರು, ಎಕ್ಸೈಜ್ ಕಂಟ್ರಾಕ್ಟರುಗಳು ಮತ್ತು ಜನರು ಸೇರಿಕೊಂಡು ಕಳ್ಳಬಟ್ಟಿ ತಯಾರು ಮಾಡುವುದಕ್ಕೆ ಹೊರಟಿದ್ದಾರೆ.

10.20 ಎ.ಎಂ

ಬೈಲಹೊಂಗಲ್,ಸಾದತ್ತಿ, ಗೋಕಾಕ್, ರಾಮದುರ್ಗದಲ್ಲಿ ಇವತ್ತಿನದಿವಸ ಕಳ್ಳಬಟ್ಟಿ ತಯಾರಿಸುತ್ತಿದ್ದಾರೆ. ಹೀಗಾಗಿ ಮೊನ್ನೆ 3 ಜನ ಹಳಕಿ ಗ್ರಾಮದಲ್ಲಿ ಸತ್ತಿದ್ದಾರೆ. 4-5 ಜನ ಸಿವಿಲ್ ಆಸ್ಪತ್ರೆಯಲ್ಲಿ ಅಡ್ಮಿಟ್ ಆಗಿದ್ದಾರೆ. ಈ ಕಳ್ಳಭಟ್ಟಿ ತಯಾರಿಕೆಯನ್ನು ನಿಲ್ಲಿಸುವಪುದಕ್ಕೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ? ಇದಕ್ಕೆ ಶಾಮಿಲು ಆಗಿರುವ ಎಕ್ಸೆಸ್ ಇಲಾಖೆಯ ಅಧಿಕಾರಿಗಳ ಮೇಲೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ಎಂದು ಕೇಳುತ್ತೀನೆ ?

ಶ್ರೀ ಎಂ.ವೀರಪ್ಪ ಮೊಯ್ಲಿ (ಮುಖ್ಯಮಂತ್ರಿಗಳು) : ಸನ್ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಪ್ರಾಚಾರ್ಯರಾದ ನಂಜುಂಡಸ್ವಾಮಿಯವರು ಮತ್ತು ವಾಟಾಳ್ ನಾಗರಾಜ್ ಅವರು ತೆಲುಗು-ಗಂಗಾ ಮತ್ತು ಸಮಾನಾಂತರ ಕಾಲುವೆ ಬಗ್ಗೆ ಮಾತನಾಡಿದ್ದಾರೆ. ಈಗ ನಮ್ಮ ವಾದ ಅಂತೂ ಸ್ಪಷ್ಟ ಇದೆ. ಏಕೆಂದರೆ ನಮಗೆ ಬಚಾವತ್ ಅವಾರ್ಡ್ ಪ್ರಕಾರ ಏನು ನಮ್ಮ ಪಾಲಿಗೆ ನೀರು ಬಂದಿದೆ ಅದನ್ನು ನಾವು 2000 ಎ.ಡಿ. ಒಳಗೆ ನಾವು ಖಂಡಿತಾ ಉಪಯೋಗ ಮಾಡಿಕೊಳ್ಳುತ್ತೇವೆ. ಅದರಲ್ಲಿ ಕಾಂಪ್ರಮೈಸ್ ಇಲ್ಲ. ತೆಲುಗು ಗಂಗಾ ಅಥವಾ ಸಮಾನಾಂತರ ಕಾಲುವೆ ಈ ಬಚಾವತ್ ಒಳಗೆ ಬರುವುದಿಲ್ಲ.It is totally unauthorised and it is totally illegal.ಅದಕ್ಕೆ ನಮ್ಮ ಕರ್ನಾಟಕ ಬೆಂಬಲ ಕೊಡುವ ಪ್ರಶ್ನೆಯೇ ಇಲ್ಲ. ಇದಕ್ಕೆ ತೀವ್ರವಾದ ಪ್ರತಿಭಟನೆಯನ್ನು ಈಗಾಗಲೇ ಸಲ್ಲಿಸಿದ್ದೇವೆ. ಎರಡನೆಯದು ಎಂದರೆ (ಬಿ) ಸ್ಕೀಮ್ ಪ್ರಕಾರ 2000 ಎ.ಡಿ. ಯೊಳಗೆ ನೀರನ್ನು ಉಪಯೋಗ ಮಾಡಬೇಕಾಗಿದೆ. ಅದರ ಬಗ್ಗೆ ಸಮಾಲೋಚನೆ ಆಗಬೇಕಾಗಿದೆ We are prepared for the discussion even now.ಇದಕ್ಕಾಗಿ ಹಾಗೆ ಮಹರಾಷ್ಟ್ರದ ಮುಖ್ಯಮಂತ್ರಿಯಾಗಿದ್ದ ಆ ಸುಧಾಕರ್ ನಾಯಕ್ ರವರು ನಮ್ಮನ್ನು ಕರೆದಿದ್ದರು.ಸಮ್ಮನ್ನು ಮತ್ತು ಆಂಧ್ರಪ್ರದೇಶದ ಮುಖ್ಯ ಮಂತ್ರಗಳನ್ನು ಕರೆಸಿ (ಬಿ) ಸ್ಕೀಮ್ ಬಗ್ಗೆ ಸಮಾಲೋಚನೆ ಮಾಡೋಣ ಎಂದು ಹೇಳಿದ್ದರು. ಆ ಸಭೆ ಮುಂದೂಡಲ್ಪಟ್ಟಿತು. ಈ ಬಗ್ಗೆ ಮುಂದೆ ಸಭೆ ಕರೆದಾಗ ಇದರ ಬಗ್ಗೆ ನಮ್ಮ ನ್ಯಾಯವಾದ ಸ್ಪಷ್ಟವಾದ ಅಭಿಪ್ರಾಯವನ್ನು ಖಂಡಿತವಾಗಿ ವ್ಯಕ್ತ ಮಾಡುತ್ತೇವೆ. ಆದರೆ ನಮ್ಮ ಪಾಲಿನ ನೀರನ್ನು ಪಡೆಯಲು ತೆಲುಗು-ಗಂಗಾ ಮುಖಾಂತರ ಸಮಾನಾಂತರ ಕಾಲುವೆ ಏನು ಮಾಡಬೇಕೆಂದು ಅಪೇಕ್ಷೆ ಪಟ್ಟಿದ್ದಾರೆ ಅದಕ್ಕೆ ಅವಕಾಶ ಕೊಡತಕ್ಕ ಪ್ರಶ್ನೆಯೇ ಇಲ್ಲ. ಅದನ್ನು ಕರ್ನಾಟಕ ಸರ್ಕಾರ ತೀವ್ರವಾಗಿ ವಿರೋಧ ಮಾಡುತ್ತದೆ.

ಶ್ರೀ ವಾಟಾಳ್ ನಾಗರಾಜ್ : ಅವರು ಕಾರ್ಯಾಲಯ ತೆರೆದಿದ್ದಾರೆ.

ಶ್ರೀ ಎಂ. ವೀರಪ್ಪ ಮೆಯ್ಲಿ : ಅವರ ಜಾಗದಲ್ಲಿ ಅವರು ಕಾರ್ಯಾಲಯ ತೆಗೆದರೆ ನಾವು ಏನು ಮಾಡುವುದಕ್ಕೆ ಬರುತ್ತದೆ ? ಆದರೆ ನಮ್ಮ ಹಕ್ಕು ಬಿಟ್ಟುಕೊಡತಕ್ಕ ಪ್ರಶ್ನೆ ಇಲ್ಲ. ನಮ್ಮ ಪಾಲಿನ ನೀರನ್ನು ಉಪಯೋಗ ಮಾಡಿಕೊಳ್ಳುವುದಕ್ಕೆ ಖಂಡಿತಾ ಕಾರ್ಯಕ್ರಮವನ್ನು ನಾವು ತೆಗೆದುಕೊಳ್ಳುತ್ತೇವೆ.